ಯಾಕೋ ಒಮ್ಮೆಲೆ ಗಂಟಲುಬ್ಬಿ ಕಣ್ಣಲ್ಲಿ ನೀರು ಬರುವಂತಾದಾಗ ನಾಚಿಕೆಯಾಗಿ ಅವರಿಗೆ ಕಾಣದಂತೆ ತಿರುಗಿ ಸೆರಗಿಂದ ಕಣ್ಣೊರಿಸಿಕೊಂಡಳು.

"ಎಲ್ಲಾ ಕಡೆ ಚೆಂದಾಗಿ ನೋಡಿದ್ರಾ ಅಮ್ಮೋರೇ ಏನೇನು ಕಳುವಾಗ್ಯೆತೆ ಅಂತ" ನಿಂಗಮ್ಮ ಧುತ್ತನೆ ಎದುರು ನಿಂತು ಕೇಳಿದ ಪ್ರಶ್ನೆಗೆ, "ಹೇ ಇಲ್ಲ ಕಣೇ ಇನ್ನುಮೇಲೆ..." ಅಂತ ತೊದಲುವಷ್ಟರಲ್ಲಿ ಅವಳು ಮುಖ ಚೂಪು ಮಾಡಿಕೊಂಡು ಹುಡುಕಲು ಹೋಗಿಯೇ ಬಿಟ್ಟಳು. ಅವಳ ಹಿಂದೆ ಹಿಂದೆಯೇ ಹಾಲಿನ ಮೂಲೆ ಮೂಲೆಯೆಲ್ಲಾ ಜೀವಿಕಾನೂ ಸುತ್ತಿ ಬಂದಳು, ಅಲ್ಲೇ ಟೀಪಾಯಿಯ ಮೇಲಿದ್ದ ತನ್ನ ವಾಚು, ಗಡಿಬಿಡಿಯಲ್ಲಿ ಕಳಚಿಟ್ಟಿದ್ದ ಚಿನ್ನದುಂಗುರ, ದುಬಾರಿ ಮೂರ್ತಿಗಳು ಯಾವುದೂ ಮುಟ್ಟಿರಲಿಲ್ಲ ಕಳ್ಳ. ಬಹುಶಃ ಮನೇಲಿ ಯಾರಿಲ್ಲ ಅಂತ ಬಂದಿದ್ದಾನೆ; ಅತ್ತೆಯ ಕೂಗು ಕೇಳಿ ಬಂದಂತೆಯೇ ತಿರುಗಿ ಓಡಿಹೋಗಿದ್ದಾನೆ. ಸದ್ಯ ಏನೂ ಕಳುವಾಗಲಿಲ್ಲವಲ್ಲ.

ವರಾಂಡಾದ ಕಿಡಕಿ, ಬಾಗಿಲು ತೋರಿಸಿ, ''ಅಮ್ಮಾರೇ ಈಗ ಯಾವಾಗ್ಲೂ ಹಾಕಿಯೇ ಇಡಬೇಕಮ್ಮಾರೆ" ಅಂತ ನಿಂಗಮ್ಮ ಉಪದೇಶ ಕೊಟ್ಟು, "ಅದರಲ್ಲೂ ನೀವು ಬಂಗಲೆ ಜನ ಮನೇಗೆ ಗೋಡೆಗಿನ್ನಾ ಕಿಡಕೀನೇ ಜಾಸ್ತಿ ಇಡ್ತೀರಪ್ಪಾ" ಅಂತ ರಿಮಾರ್ಕು ಮಾಡಿ ತನ್ನ ನಿರೀಕ್ಷಣೆಯಲ್ಲಿ ಮತ್ತೆ ಮಗ್ನಳಾದಳು.

"ಅಮ್ಮಾರೇ ಇಲ್ನೋಡಿ" ಸಣ್ಣಗೆ ಚೀರಿದಂತೆ ಕೂಗಿದಳು. "ಕಳ್ಳ ಕೊರಮ ಅವನ ಮನೆ ಹಾಳಾಗ! ಹೋಗ್ತಾ ಹೋಗ್ತಾ ಏನೋ ತಗೊಂಡು ಜೋರಾಗಿ ಬಡೆದವ್ನೆ ಅಂತ ಕಾಣುತ್ತೆ. ಪೂರಾ ಕಿಡಕಿಯ ಕಟ್ಟೇ ಬಿಚ್ಚುವಂತಿದೆ. ಇಲ್ಲಾ ಮತ್ತೆ ಬರಬೇಕಂತ ಸಡ್ಲ ಮಾಡ್ಕೊಂಡವನೇನೋ" ಕಟ್ಟು ಅಲ್ಲಾಡಿಸಿ ತೋರಿಸಿದಳು ನಿಂಗಮ್ಮ. ಈಗ ನಿಜವಾಗಿ ಬೆಚ್ಚಿದಳು ಜೀವಿಕಾ. ಹೌದು, ಕಿಡಕಿಯ ಕಟ್ಟು ಜೋರಾಗೇ ಅಲುಗಾಡುತ್ತಿದೆ. 'ನಾನ್ಯಾಗೆ ನೋಡಲೇ ಇಲ್ಲ, ಯಾವ ಸದ್ದೂ ಕೇಳಲಿಲ್ಲ? ಅಬ್ಬಾ! ಕಳ್ಳ ಕಟ್ಟು ತೆಗೆದೊಗೆದು ಜಿಗಿದು ಬಂದು ಮನೆಯೊಳಗಡಗಿ ಕೂತು ತಾನೊಬ್ಬಳೇ ಇರುವಾಗ ಮೇಲೆರೆಗಿದ್ದರೆ? ಇಲ್ಲಾ ಕಟ್ಟಿಗೆ ಕಟ್ಟೇ ಬಿಚ್ಚಿ ತನ್ನ ತಲೆಯ ಮೇಲೆ ಬಿದ್ದಿದ್ದರೆ?' ಯೋಚಿಸಿ ಜಿಲ್ಲನೆ ಬೆವೆತು ಹೋದಳು ಜೀವಿಕಾ. ಹೋಗಲಿ ಅನಾಹುತಕ್ಕೂ ಮುಂಚೇನೇ ಕಂಡದ್ದಾಯ್ತಲ್ಲ. ಇನ್ನು ತಡ ಮಾಡಬಾರದು, ಕೂಡಲೇ ಗಾರೆ ಹಾಕಿಸಿ ಜಾರಿದ ಕಟ್ಟನ್ನು ಗಟ್ಟಿ ಮಾಡಬೇಕು. ಮರುಕ್ಷಣ, 'ಅರೆ, ಈ ಹಿತ್ತಲಿಗೆ ಹೋಗೋ ಬಾಗಿಲು ತೆರೆದರೆ ಬರೀ ಬೆಳಕ್ಯಾಕೆ? ಕೂತು ಮೈಕಾಸುವಂಥಾ ಹಿತವಾದ ಬಿಸಿಲೂ ಹಾಯುತ್ತೆ. ಕಿಡಕಿಯಾದ್ರೂ ಯಾಕೆ ಬೇಕು ಸುಮ್ಮನೆ? ಈಗಿಂದೀಗಲೇ ಕಬ್ಬಿಣದ ಶೀಟು ಹಾಕಿಸಿ ಮುಚ್ಚೇ ಬಿಡಬೇಕಿದನ್ನು.' ಅನ್ನಿಸಿತು. ಯೋಚಿಸಿದಂತೆ ಅದೇ ವಿಚಾರ ಗಟ್ಟಿಯಾಯ್ತು. ಕೂಡಲೇ ಅವಿನಾಶನಿಗೆ ಫೋನಾಯಿಸಿದರೆ ಇನ್ನೂ ಮೀಟಿಂಗಿನಲ್ಲಿದ್ದನೇನೋ ಬರೀ ಬೀಪ್ ಬೀಪ್ ಸದ್ದು. 'ಹಿತ್ತಲಿನ ಕಿಡಕಿ ಕಾಯಂ ಆಗಿ ಮುಚ್ಚಬೇಕಾಗಿದೆ; ಅದೂ ಬೆಳಗಾಗೋದರೊಳಗೆ, ಆದಷ್ಟು ಬೇಗ ಬಾ' ಅಂತ ಸಂದೇಶ ಕಳಿಸಿ ಮೇಲೆ ಬಂದಾಗ ತಲೆ ಹಗುರಾಗಿತ್ತು. ಆಗಲೇ ಕೆಂಪು ಕಣ್ಣು ಬಿಡುತ್ತಿದ್ದ ಮೊಬೈಲಿಗೆ ಜೀವ ಕೊಡದೆ ಪೂರ್ತಿ ಆಫ್ ಮಾಡಿ ದಿಂಬಿಗೆ ತಲೆಯಿಟ್ಟೊಡನೆ ಸುಖವಾದ ಮಂಪರು ಆವರಿಸಿತು.




**ಸಪ್ನಾ ಕಟ್ಟಿ**

ಪುಣೆಯಲ್ಲಿ ನೆಲೆಸಿರುವ ಸಪ್ನಾ ಕಟ್ಟಿ ಅನುವಾದಕಿ ಮತ್ತು ಕತೆಗಾರ್ತಿ. ಕತೆ, ಕವನಗಳು ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಕರ್ನಾಟಕ ವಿಶ್ವವಿದ್ಯಾಲಯದಿಂದ ಭೌತಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಮೂಲತಃ ಧಾರವಾಡದವರು.